**<u>ಸಾಕ್ಷಿಯನ್ನು ದಿನಾಂಕ 20.11.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಬಿ. ಆರ್.ಎಸ್. ವಕೀಲರಿಂದಃ</u>**

ಒಟ್ಟು ಕುಟುಂಬದ ವಾರ್ಷಿಕ ವರಮಾನ ಎಷ್ಟು ಎಂದರೆ ಸಾಕ್ಷಿಯು ಈಗಾಗಲೇ ವಿಭಾಗ ಆಗಿತ್ತು ಎಂದು ನುಡಿಯುತ್ತಾರೆ. ನಾರಾಯಣಸ್ವಾಮಿ ಮತ್ತು ಬಚ್ಚಿರೆಡ್ಡಿರವರ ಒಟ್ಟು ಕುಟುಂಬದ ವಾರ್ಷಿಕ ವರಮಾನ ಎಷ್ಟು ಎಂದರೆ ಸಾಕ್ಷಿಯು ವ್ಯವಸಾಯದಿಂದ ಬಂದ ವರಮಾನ ಅವರ ಖರ್ಚು ವೆಚ್ಚಿಗೆ ಸಾಕಾಗುತ್ತಿರಲಿಲ್ಲ. ಬೇರೆ ಆಸ್ತಿ ಮಾಡುವಷ್ಟು ಉಳಿಕೆ ಹಣ ಇರಲಿಲ್ಲ. ಬಾಯಿ ಮಾತಿನ ವಿಭಾಗ ಆಗಿದೆ ಎಂದು ಹೇಳಿದ ನಂತರ ಯವುದಾದರು ದಾಖಲಾತಿ ಮಾಡಿಕೊಂಡಿದ್ದಾರಾ ಎಂದರೆ ಸಾಕ್ಷಿಯು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿ ನೋಂದಣಿಯಾಗಿದೇಯಾ ಎಂದರೆ ಸಾಕ್ಷಿಯು ಅದು ನೋಂದಣಿ ಆಗಿಲ್ಲ ತಾಲ್ಲೂಕು ಕಚೇರಿಯಲ್ಲಿ ಬರೆದುಕೊಂಡಿದ್ದಾರೆ. ಆ ರೀತಿ ಬಾಯಿ ಮಾತಿನಲ್ಲಿ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತೇನೆ.

ಆ ಕಾಲಕ್ಕೆ ಒಟ್ಟು ಕುಟುಂಬದಲ್ಲಿ 40 ರಷ್ಟು ಆಸ್ತಿ ಇದ್ದಿರಬಹುದು. ಒಟ್ಟು ಕುಟುಂಬಕ್ಕೆ ಆಗ ಅಂದಾಜು 20 ಎಕರೆ ಜಮೀನು ಇದ್ದಿರಬಹುದು. ಸರ್ವೆ ನಂಬರಗಳು ಗೊತ್ತಿಲ್ಲ. ತಿಮ್ಮಸಂದ್ರ, ನಾಯನಹಳ್ಳಿ, ಮಸಲೇನಹಳ್ಳಿ ಮತ್ತು ಚಿಂತಾಮಣಿಯಲ್ಲಿ ಜಮೀನುಗಳು ಇದ್ದವು ಆದರೆ ನಿಖರವಾದ ಎಷ್ಟು ಜಮೀನು, ವಿಸ್ತೀರ್ಣ ಗೊತ್ತಿಲ್ಲ. ಎಲ್ಲಾ ಆಸ್ತಿಗಳಲ್ಲಿ ಎಲ್ಲಾ ಭಾಗಸ್ದರು ಭಾಗ ತೆಗೆದುಕೊಂಡಿದ್ದಾರಾ ಅಥವಾ ಬೇರೆ ಬೇರೆ ಕಡೆಯಲ್ಲಿ ತೆಗೆದುಕೊಂಡಿದ್ದಾರಾ ಎಂದರೆ ಸಾಕ್ಷಿಯು ಅವರು ಮಾಡಿಕೊಂಡ ವಿಭಾಗದಂತೆ ಬೇರೆ ಬೇರೆ ಕಡೆಯಲ್ಲಿ ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾನು 2 ನೇ ಪ್ರತಿವಾದಿ ವಿಶ್ವಾಸದಿಂದ ಇದ್ದೇವೆ. 2 ನೇ ಪ್ರತಿವಾದಿಯ ಪರವಾಗಿ ನಾನು ನನ್ನ ಪ್ರಮಾಣ ಪತ್ರದಲ್ಲಿ ಮಾಹಿತಿಯನ್ನು ಕೊಟ್ಟಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಕೆಲವೊಂದು ಆಸ್ತಿಯನ್ನು ಹೆಸರಿಸಿ ಅದರಲ್ಲಿ ಭಾಗ ಬರಬೇಕೆಂದು ಆಸ್ತಿಗಳ ಪಟ್ಟಿ ಕೊಟ್ಟಿದಾರೆ ಎಂದರೆ ಸರಿ. ಸದರಿ ತನ್ನ ಪ್ರತಿವಾದ ಪತ್ರದಲ್ಲಿ ಆಸ್ತಿಗಳ ವಿವರ , ಗ್ರಾಮ ಮತ್ತು ವಿಸ್ತೀರ್ಣ ಗೊತ್ತಿಲ್ಲ. 1 ನೇ ಪ್ರತಿವಾದಿಯ ಪ್ರತಿವಾದ ಪತ್ರದಲ್ಲಿ ತಿಳಿಸಿದ ಆಸ್ತಿಗಳು ಸಹ ಮೌಖಿಕ ವಿಭಾಗದಲ್ಲಿ ಭಾಗವಾಗಿವೆ ಎಂದು ತಿಳಿಸಿದ್ದು ಅದು ಯಾರ ಭಾಗಕ್ಕೆ ಹೋಗಿವೆ ಎಂದು ನನಗೆ ಗೊತ್ತಿಲ್ಲ. ದಾವೆಯಲ್ಲಿ ತೋರಿಸಿರುವ ಆಸ್ತಿಗಳ ಉತ್ಪನ್ನದಲ್ಲಿ ವರ್ಷಕ್ಕೆ ಸ್ವಲ್ಪ ಸ್ವಲ್ಪ ಹಣ ಉಳಿಯುತ್ತಿತ್ತು. ನನ್ನ ಅಣ್ಣಂದಿರು ಬೆಳೆ ತೆಗೆಯುತ್ತಿದ್ದರು. ನನ್ನ ತಂದೆಗೆ ಆಗ ಹುಷಾರ ಇರಲಿಲ್ಲ. ನಾವೆಲ್ಲ ಅಣ್ಣತಮ್ಮಂದಿರು ಲೆಕ್ಕಚಾರ ಮಾಡುತ್ತಿರಲಿಲ್ಲ. ಆ ರೀತಿ

ಯಾವುದೇ ಹಣ ಉಳಿತಾಯ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ ಮತ್ತು ದಾವಾ ಆಸ್ತಿಯಲ್ಲಿ ಯಾವುದೇ ಬೆಳೆ ತೆಗೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ತನ್ನ ಸ್ವಂತ ಹಣದಿಂದ ನನಗೆ ಆಸ್ತಿ ಖರೀದಿಸಲು ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಐಟಂ ನಂ. 22 ರಿಂದ 24 ಆಸ್ತಿಗಳನ್ನು ಖರೀದಿಸಲು 1 ನೇ ಪ್ರತಿವಾದಿ ನನಗೆ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ದುರುದ್ದೇಶದಿಂದಲೇ ಸದರಿ ಆಸ್ತಿಗಳನ್ನು ವಾದ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದನ್ನು ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸುಳ್ಳು ದಾವೆ ತಂದಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ. 4 ಮತ್ತು 11 ಆಸ್ತಿಗಳು 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ಸರಿಯಲ್ಲ ಅದು ಒಟ್ಟು ಕುಟುಂಬದ ಆಸ್ತಿ. ದುರುದ್ದೇಶದಿಂದಲೇ ಸದರಿ ಆಸ್ತಿಗಳನ್ನು ವಾದ ಪತ್ರದಲ್ಲಿ ತೋರಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ. 4 ಮತ್ತು 11 ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮಸಲೇನಹಳ್ಳಿಯ ಸರ್ವೆ ನಂ. 53 ರಲ್ಲಿ 3 ಎಕರೆ 20 ಗುಂಟೆ ನಮ್ಮ ತಾತನ ಹೆಸರಿನಲ್ಲಿದೆ. ಸದರಿ ಆಸ್ತಿಗಳನ್ನು ವಾದ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಬಿಟ್ಟು ಹೋಗಿತ್ತು ನಂತರ ತೋರಿಸಿದ್ದೇವೆ. ಅದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ತಿಮ್ಮಸಂದ್ರ ಗ್ರಾಮದ ಸರ್ವೆ ನಂ.122/2 ರಲ್ಲಿ 5 ಎಕರೆ 34 ಗುಂಟೆ ಪೈಕಿ 1 ಎಕರೆ ಅದು ಪಿತ್ರಾರ್ಜಿತ ಆಸ್ತಿ ಎಂದರೆ ಇರಬಹುದು. ನಾಯನಹಳ್ಳಿಯ ಸರ್ವೆ ನಂ. 72 ರಲ್ಲಿ 7 ಗುಂಟೆ ಅದು ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಅದು ನನ್ನ ಸ್ವಂತ ಆಸ್ತಿ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.